


“ಆತ ತನ್ನ ಶೂವನ್ನು ಹೇಗೆ ಗುರುತಿಸುತ್ತಾನೆ? ಹೊಸತೆಲ್ಲವೂ ಒಂದೇ ತೆರನಾಗಿ ಇರುತ್ತದಲ್ವೇ? ಆತ ಎಡಗಾಲಿನ ಬೂಟು ಮಾತ್ರ ಕದಿಯುತ್ತಾನೆ ಅಂತ ಕೇಳ್ದೆ. ಯಾಕದು?” ಡಿಸೋಜನ ಪ್ರಶ್ನೆ.

“ಎಡಗಾಲಿನ ಶೂನಲ್ಲಿ ಇದ್ದ ವಿಶೇಷತೆಯಿಂದಾಗಿ ಅದು ಬಾದಾಮಿಗೆ ಅಗತ್ಯವಾಗಿತ್ತು. ಆ ವಿಶೇಷತೆಯಿಂದಲೇ ಆತ ತನ್ನ ಶೂವನ್ನು ಗುರುತಿಸಬಲ್ಲವನಾಗಿದ್ದ. ಅದೇನು ಗೊತ್ತೆ? ಆ ಶೂನಲ್ಲಿ ಒಂದು ರಹಸ್ಯ ವಸ್ತುವನ್ನು ಅಡಗಿಸಲಾಗಿದೆ! ಅದನ್ನು ಪಡೆಯಲೋಸುಗ ಬಾದಾಮಿ ಯತ್ನಿಸುತ್ತಿದ್ದ. ಪಳನಿಗೂ ಆ ಶೂನಲ್ಲಿರುವ ವಿಶೇಷತೆಯ ಬಗ್ಗೆ ಗೊತ್ತಿತ್ತು. ಜೊತೆಗೆ, ಬಲಕಾಲಿನ ಶೂನಲ್ಲಿದ್ದ ವಿಚಿತ್ರವನ್ನೂ ಆತ ಬಲ್ಲವನಾಗಿದ್ದ. ಅದು ಬಾದಾಮಿಗೆ ಗೊತ್ತಿರಲಿಲ್ಲ. ಅದೇನೆಂದರೆ, ಶೂನಲ್ಲಿ ಅಡಗಿಸಿಟ್ಟ ಜಿಪಿಎಸ್! ಪಳನಿಯಲ್ಲಿ ಆ ಜಿಪಿಎಸ್ ಟ್ರಾಕ್ ಮಾಡುವ ಟ್ರಾಕರ್ ಇತ್ತು! ಹಾಗಾಗಿ, ಪಳನಿ ಎಲ್ಲಾ ಹೊಸ ಶೂಗಳ ಗ್ರಾಹಕರ ಮನೆಗೆ ಹೋಗದೇ ಸೀದಾ ಇಲ್ಲಿಗೇ ಬಂದಿದ್ದಾನೆ. ದಶಗಣಪತಿಯವರೇ, ನಿಮ್ಮ ಈ ಶೂನಲ್ಲಿ ಜಿಪಿಎಸ್ ಇದೆ. ಮಧ್ಯಾಹ್ನ ಶೂವನ್ನು ಕಂಡಾಗಲೇ ಅದರ ಹೀಲ್ಸ್‌ನಲ್ಲಿ ಸೂಕ್ಷ್ಮವಾಗಿ ಕೆತ್ತಿದ ತೂತನ್ನು ಗಮನಿಸಿದೆ. ಪಳನಿ ಕುರುಡನಂತೆ ಕೈ ಮುಂದೆ ಚಾಚಿಕೊಂಡು ಬಂದ ಅಂತ ಅಂದ್ರಿ. ಅದು ನನ್ನ ಅನುಮಾನವನ್ನು ಖಚಿತಪಡಿಸಿತು. ಜಿಪಿಎಸ್ ಸಿಗ್ನಲ್ಲಿಗಾಗಿ ಪಳನಿ ಟ್ರಾಕರ್‌ಅನ್ನು ಕೈಯಲ್ಲಿ ಮುಂದೆ ಹಿಡಿದು, ಪ್ರಯತ್ನಿಸುತ್ತಿದ್ದ. ಆಗ ಅವ್ನಿಗೆ ಸಿಗ್ನಲ್ ಸಿಕ್ಕಿದೆ. ಆತ ನೇರವಾಗಿ ಶೂ ಸ್ಟ್ಯಾಂಡ್ ಬಳಿ ಬಂದಿದ್ದಾನೆ. ಶೂನಲ್ಲಿ ಜಿಪಿಎಸ್ ಯಾಕಿಟ್ಟಿದ್ದಾರೆ? ಅದರಲ್ಲೇನೋ ಅಮೂಲ್ಯವಾದ ವಸ್ತು ಇರಬೇಕೆನ್ನುವುದನ್ನು ಸುಲಭವಾಗಿ ಊಹಿಸಬಹುದು.”

“ಆ ವಸ್ತು ಯಾವುದು? ಆತನಿಗೆ ಶೂ ನನ್ನಲ್ಲಿರುವ ವಿಚಾರ ಹೇಗೆ ಗೊತ್ತಾಯಿತು?”

“ಅದಕ್ಕೆ ಉತ್ತರವನ್ನು ಪಳನಿಯೇ ಹೇಳಬೇಕು. ಜೊತೆಗೆ, ಚಿಪ್ಪಣ್ಣನನ್ನು ಕೊಂದ ಬಗೆಗೂ ಹೇಳಿದರೆ ಚೆನ್ನ. ಇಲ್ಲದಿದ್ರೆ, ನಾನೇ ಹೇಳ್ತೀನಿ.” ಕರಮಚಂದ ಪಳನಿಯತ್ತ ದಿಟ್ಟಿ ಬೀರಿದ.

ವಿಧಿಯಿಲ್ಲದೆ ಪಳನಿ ಮಾತಿಗಾರಂಭಿಸಿದ,

“ಒಂದು ದಿನ ನನ್ನ ಮಿತ್ರ ಚಿಪ್ಪಣ್ಣ ನನ್ನಲ್ಲಿ ಬಂದು, ತಾನೊಂದು ದೊಡ್ಡ ಸಾಹಸಕ್ಕೆ ಕೈ ಹಾಕಿದ್ದು,